CC 20/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 22.09.2025

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ ಎಸ್ ಕೆ ವಕೀಲರಿಂದಃ**

ಆರೋಪಿಯು ಯುನಿಯನ್ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿರುತ್ತಾರೆ. ನಮ್ಮ ವಕೀಲರ ಮೂಲಕ ಆರೋಪಿಗೆ ಹಣ ಕೊಡುವಂತೆ ನೋಟೀಸ್ ಕಳುಹಿಸಿದ್ದೆ. ಯಾವ ದಿನಾಂಕ ನೆನಪಿಲ್ಲ. ಆರೋಪಿಗೆ ನವೆಂಬರ್ 19 ನೇ ತಾರೀಖಿನಂದು ನೋಟೀಸು ಜಾರಿಯಾಗಿರುತ್ತದೆ. ಪ್ರಶ್ನಿತ ಚೆಕ್ಕಿನಲ್ಲಿ ಸಹಿಗೆ ಬಳಸಿದ ಶಾಹಿ ಮತ್ತು ಉಳಿದ ಬರವಣಿಗೆಗೆ ಬಳಸಿದ ಶಾಹಿ ಬೇರೆ ಬೇರೆ ಇರುತ್ತವೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರಶ್ನಿತ ಚೆಕ್ಕನ್ನು ನಾನೇ ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಸಹಿಗೂ ಮತ್ತು ನಿಪಿ.5 ರಲ್ಲಿರುವ ಸಹಿಗೂ ವ್ಯತ್ಯಾಸ ಇರುವ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ನಿಪಿ.3 ರಲ್ಲಿ ನನ್ನ ಸಹಿಯಾಗಲೀ ಅಥವಾ ನಮ್ಮ ವಕೀಲರ ಸಹಿಯಾಗಲೀ ಇಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮಾರ್ಚ್-2024 ರಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದೆನೋ ಇಲ್ಲವೋ ನಮ್ಮ ಸಿಎಯವರನ್ನು ಕೇಳಿದರೆ ಗೊತ್ತಾಗುತ್ತದೆ. ಮಾರ್ಚ್ -2024 ರ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ಈ ಪ್ರಕರಣದ ಚೆಕ್ಕಿನ ಮೊತ್ತವನ್ನು ಕಾಣಿಸಿಲ್ಲ. 2 ಲಕ್ಷಕ್ಕಿಂತ ಮೇಲ್ಪಟ್ಟ ಹಣವನ್ನು ಡಿಡಿ, ಚೆಕ್, ಅಕೌಂಟ್, ಆರ್ ಟಿ ಜಿ ಎಸ್ ಮೂಲಕ ಪಾವತಿಸಬೇಕು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಆರೋಪಿಯು ನನ್ನನ್ನು ಯಾವತ್ತು ನೋಡಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಆರೋಪಿಯು ಮೊದಲ ಬಾರಿಗೆ ದಿನಾಂಕ 02.08.2025 ರಲ್ಲಿ ನೋಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹ ಆರೋಪಿಯನ್ನು ಮೊದಲ ಬಾರಿಗೆ ದಿನಾಂಕ 02.08.2025 ರಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಪರಿಚಯ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸಾಕ್ಷಿಯು ನಾನು ಹಣವನ್ನು ಆರೋಪಿಯ ಕೈಗೆ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆರೋಪಿ ಕಡೆಯಿಂದ ಅಕ್ರಮ ಹಣ ಗಳಿಸುವ ಉದ್ದೇಶದಿಂದ ನಾನು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ ಎಂದರೆ ಸಾಕ್ಷಿಯು ವ್ಯತಾಸ ಇದ್ದು ಮತ್ತು ಸದರಿ ದಾಖಲೆ ಜೆರಾಕ್ಸ್ ಇರುವುದರಿಂದ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಮಂಜುನಾಥ ಎನ್ ಬಿನ್ ನರಸಯ್ಯ, ಸೋಮಶೆಟ್ಟಿಹಳ್ಳಿ, ಲಿಂಗದಹಳ್ಳಿ ದಾವಣಗೆರೆ ಎಂದರೆ ನಾನು. ನಾನು ವಿಶ್ವಂ ಫೈನಾನ್ಸ ನ ಒಬ್ಬ ಪಾಲುದಾರ ಎಂದರೆ ಸರಿಯಲ್ಲ. ನಾವು 4 ಜನ ವಿಶ್ವಂ ಫೈನಾನ್ಸನ ಪಾಲುದಾರರು ಇದ್ದು ನಮ್ಮ ವಿರುದ್ದ ಸಾಗರದ ಡಿ ವೈ ಎಸ್ ಪಿ ಕಚೇರಿಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾವು 4 ಜನ ಪಾಲುದಾರರು ಗ್ರಾಹಕರಿಗೆ ಮೀಟರ್ ಬಡ್ಡಿ ದರದಲ್ಲಿ ಸಾಲವನ್ನು ನೀಡುತ್ತೇವೆ ಎಂದು ದೂರಿನಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ವಿಶ್ವಂ ಫೈನಾನ್ಸ ನ ಒಬ್ಬ ಪಾಲುದಾರರಾದ ಸುರೇಶ್ ಹೆಚ್ ಟಿ ಎನ್ನುವವರು ಆರೋಪಿಯ ಗಂಡನ ವಿರುದ್ದ 8 ಲಕ್ಷ ಮೊತ್ತಕ್ಕೆ ಸಾಗರದ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆರೋಪಿಗೆ ಸಂಬಂಧಿಸಿದ ಪ್ರಶ್ನಿತ ಚೆಕ್ಕನ್ನು ಹೊರತುಪಡಿಸಿ ಇನ್ನು 4 ಚೆಕ್ಕುಗಳು ಇದ್ದು ಅವುಗಳನ್ನು ನಮಗೆ ಕೇಳಲು ಬಂದಾಗ ನಾವು

ಅವರಿಗೆ ಮರಳಿಸಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.  ವಿಶ್ವಂ ಫೈನಾನ್ಸಗೆ ಹಣಕಾಸಿನ ವ್ಯವಹಾರ ನಡೆಸಲು ಪರವಾನಗಿ ಇಲ್ಲದ ಕಾರಣ ನಾನು ನನ್ನ ವೈಯಕ್ತಿಕ ಹೆಸರಿನಲ್ಲಿ ಚೆಕ್ಕನ್ನು ಬರೆದುಕೊಂಡು ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.  ವಿಶ್ವಂ ಫೈನಾನ್ಸ ನಲ್ಲಿ ಆರೋಪಿಯ ಗಂಡನಿಗೆ ಸಾಲ ನೀಡಿ ಭದ್ರತೆಗಾಗಿ ಆರೋಪಿಯ ಚೆಕ್ಕನ್ನು ಪಡೆಯುವ ಬಗ್ಗೆ ನನಗೆ ಗೊತ್ತಿಲ್ಲ.  ವಿಶ್ವಂ ಫೈನಾನ್ಸ ಗೂ ಮತ್ತು ಆರೋಪಿಯ ಗಂಡನಿಗೂ ವ್ಯವಹಾರ ನಡೆದಿದ್ದು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.  ಆದ್ದರಿಂದ ಆರೋಪಿಯು ಪ್ರಶ್ನಿತ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಾವತಿಸಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**